ಬಂದು ಭೇಟಿಯಾಗಿದ್ದೆ. ತಾವು ಈಗ ಏನಾದರೂ ತೀರ್ಮಾನ ಹೇಳಿರದೆ ಹೇಳೋಣ. ಇಲ್ಲದಿದ್ದರೆ ಇನ್ನೊಂದು ಅಧಿವೇಶನದಲ್ಲಿ ಹೇಳೋಣ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಅಧ್ಯಕ್ಷರೇ, ಈಗ ಮಹಿಳಾ ಆಯೋಗಕ್ಕೆ ಮಹನೀಯರು ಅಧ್ಯಕ್ಷರಾಗುವಂತಹ ಸಂದರ್ಭವೇನಿಲ್ಲ. ಸಾಕಷ್ಟು ತಜ್ಞರಾದಂತಹ ಮಹಿಳಾಯರಿದ್ದಾರೆ. ನಮ್ಮ ಸರ್ಕಾರದಲ್ಲಿ ಅವರನ್ನೇ ಅಧ್ಯಕ್ಷರನ್ನಾಗಿ ಮಾಡುತ್ತೇವೆ.

ಶ್ರೀ ಜೆ.ಹೆಚ್. ಪಟೇಲ್(ಉಪ ಮುಖ್ಯಮಂತ್ರಿಯವರು) : ಮಾನ್ಯ. ವಾಟಾಳ್‌ನಾಗರಾಜ್ ಅವರನ್ನು ಅಧ್ಯಕ್ಷರನ್ನಾಗಿ ಮಾಡುವುದಕ್ಕಿಂತ ಮುಂಚೆ ಯೋಚನೆ ಮಾಡಬೇಕು. ಮಹಿಳೆಯರ ಬಗ್ಗೆ ಪುರುಷರು ಹೆಚ್ಚು ಅಲೋಚನೆ ಮಾಡಬಹುದು. ಶ್ರೀಮತಿ ಇಂದಿರಾಗಾಂಧಿಯವರು ಮಾಡಿದಹಾಗೆ, ಅದುದರಿಂದ ಇಲ್ಲಿ ರಾಮ ಮಹಿಳೆಯರ ಬಗ್ಗೆ ಅಲೋಚನೆ ಮಾಡಿದ್ದುದು ಬಹಳ ಸೀಮಿತವಾಗಿತ್ತು. ಕೃಷ್ಣ ಸ್ವಲ್ಪ ವಿಶಾಲವಾಗಿ ಅಲೋಚನೆ ಮಾಡಿದರು. ನನಗೆ ಗೊತ್ತಿರುವ ಹಾಗೆ ಮಾನ್ಯ ವಾಟಾಳ್ ನಾಗರಾಜ್‌ರವರು ರಾಮನ ಹಾಗೆ ಸೀಮಿತವಾಗಿರುವವರು, ನಾನು ಮತ್ತು ಮಾನ್ಯ ನಂಜೇಗೌಡರು ಕೃಷ್ಣನ ತರಹ ಅದಕ್ಕೋಸ್ಕರ ಆ ವಿಷಯವನ್ನು ಬಿಡಿ, ಬೇಕಾದರೆ ನಾನು ಮಾನ್ಯ ರಾಮಕೃಷ್ಣ ಹೆಗಡೆಯವರನ್ನು ಕೇಳಿ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ. ತಮ್ಮಲ್ಲಿ ನನ್ನದು ಒಂದು ಮನವಿ ಏನೆಂದರೆ ನಾನು ಅಲ್ಲಿಯವರೆಗೆ ಮಹಿಳಾ ಆಯೋಗಕ್ಕೆ ತಾತ್ಕಾಲಿಕವಾಗಿ ಅಧ್ಯಕ್ಷನಾಗಿ ಇರಬಹುದೋ.?

3. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕ 1995

ಪರ್ಯಾಲೋಚನೇ ಪ್ರಸ್ತಾವ

ಶ್ರೀ ಹೆಚ್.ಬಿ. ಗೋವಿಂದ ಗೌಡ ; (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು) ಮಾನ್ಯ ಅಧ್ಯಕ್ಷರೆ, 1995ರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ,

"1995ರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂದ ಖಂದವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂದ 2

ಅಧ್ಯಕ್ಷರು : "ಖಂದ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂದ 2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂದ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ.

"ಮೊದಲನೆಯ ಖಂದ, ದೀರ್ಘ ಶೀರ್ಷಿಕೆ. ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾರ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂದ, ದೀರ್ಘ ಶೀರ್ಷಿಕೆ. ಪ್ರಸ್ತಾರವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾರದ ಅಂಗೀಕಾರ

ಶ್ರೀ ಹೆಚ್.ಬಿ. ಗೋವಿಂದೇ ಗೌಡ : (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು) ಮಾನ್ಯ ಅಧ್ಯಕ್ಷರೆ,. 1995ರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಾಕ್ಷರು:ಪ್ರಸ್ತಾವ ಏನೆಂದರೆ .

"1995ರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

1995ರ ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) ತಿದ್ದುಪಡಿ ವಿಧೇಯಕ.

ಶ್ರೀ ಹೆಚ್.ಡಿ. ದೇವೆಗೌಡ (ಮುಖ್ಯಮಂತ್ರಿಯವರು): ಅಧ್ಯಕ್ಷರೇ ಕರ್ನಾಟಕ ನೀರಾವರಿ ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ (ತಿದ್ದುಪಡಿ) ವಿಧೇಯಕ 1995ಅನ್ನು ಸಭೆಪರ್ಯಾಲೋಚಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ. ಅತ್ಯಂತ ಸರಳವಾದ ಈ ತಿದ್ದುಪಡಿ ಮಸೂದೆಯನ್ನು ಸಭೆಯ ಮುಂದೆ ಇಟ್ಟಿದ್ದೇನೆ. ಇದರಲ್ಲಿ ನೀರಿನ ವಿತರಣಾ ವ್ಯವಸ್ಥೆಯ ನಿರ್ವಹಣೆಗೆ ಸಂಬಂಧಪಟ್ಟಂತೆ ಉತ್ತಮ ಫಲಿತಾಂಶಗಳನ್ನು ಸಾರಿಸುವ ಸಲುವಾಗಿ , ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಸುವ) ಅಧಿನಿಯಮ, 1957ರ 10ನೇ ಪ್ರಕರಣವನ್ನು ತಿದ್ದುಪಡಿ ಮಾಡಿ, ನೀರಿನ ವಿತರಣಾ ವ್ಯವಸ್ಥೆಯ ನಿರ್ವಹಣೆ ಮತ್ತು ನೀರು ದರಗಳನ್ನು ವಸೂಲು ಮಾಡುವ ಹೊಣೆಗಾರಿಕೆಯನ್ನು ನೀರು ಬಳಕೆದಾರರ ಸಹಕಾರ ಸಂಘಗಳಿಗೆ ವಹಿಸಿಕೊಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಆಗ ವರ್ಲ್ಡ್ ಬ್ಯಾಂಕ್‌ನವರು ಇದರಲ್ಲಿ ಒಂದೊಂದು ಬ್ಲಾಕ್ ಮಾಡಿ ಸೊಸೈಟಿ ಮಾಡಿಕೊಡುವುದು ಎಂದು ತಿಳಿಸಿದ್ದಾರೆ. ಆದ್ದರಿಂದ It is for the better water management- ಎಂದು ನಾವು ವಹಿಸಿಕೊಡುವುದು.

ಶ್ರೀ ವೈ. ರಾಮಕೃಷ್ಣ (ಆನೇಕಲ್):- ಅದು ನಾನು ಒಪ್ಪಿ ಕೊಂಡೆ ನಾನು ಕ್ಲಾರಿಫಿಕೇಷನ್ ಕೇಳುತ್ತೇನೆ. ನಮ್ಮ ರಾಜ್ಯದಲ್ಲಿ ಎಲ್ಲಾದರೂ ಇಂತಹ ಸೊಸೈಟಿಗಳು ಇವೆಯೋ ?

ಶ್ರೀ ಹೆಚ್.ಡಿ. ದೇವೇಗೌಡ : ಇದಕ್ಕೆ ನಾವು ಈ ತಿದ್ದುಪಡಿಯನ್ನು ತಂದಿದ್ದೇವೆ. ವಿದೇಶಗಳಲ್ಲಿ ವಾಟರ್ ಮ್ಯಾನೆಜ್‌ಮೆಂಟ್ ಬಗ್ಗೆ water district ಎಂದೇ ಮಾಡಿದ್ದಾರೆ. ನಿಮಗೆ ಹೇಳುವುದಾದರೆ ನಮ್ಮ ದೇಶದಲ್ಲಿ ಸರಳವಾಗಿ ಮನಸ್ಸಿಗೆ ಬಂದಷ್ಟು ನೀರನ್ನು ಬಳಕೆ ಮಾಡುವಂತಹ ಪರಿಸ್ಥಿತಿ ಪ್ರಪಂಚದಲ್ಲೇ ಯಾವ ದೇಶದಲ್ಲೂ ಇಲ್ಲ. ನಾನು ಒಂದೇರಡು ವಿಷಯಗಳನ್ನು ಹೇಳಬೇಕಾಗುತ್ತದೆ. ನಾನು ಚೈನಾ ಹಾಗೂ ಯುಗೋಸ್ಲೋವಿಯಾ